ನನ್ನ ಸಿನಿಮಾ ಮತ್ತು ಹೋಟೆಲಿನಲ್ಲಿ ತಿನ್ನುವ ಚಟಕ್ಕಾಗಿ ಬಳಸಿಕೊಳ್ಳುತ್ತಿದ್ದೆ. ಜೊತೆಗೆ ಹೊಳೆಯಲ್ಲಿ ಮೀನು ಹಿಡಿಯುತ್ತಿದ್ದ ನನ್ನ ನಿರಕ್ಷರಿ ಗೆಳೆಯರಿಗೆ ಡೈನಮೇಟ್ ಕೊಂಡುಕೊಳ್ಳಲು ಹಣ ನೀಡುತ್ತಿದ್ದೆ. ಅವರು ಬಹಳ ಸುಂದರವೂ ಪ್ರಶಾಂತವೂ ಆಗಿದ್ದ ನಮ್ಮ ಬಾಲ್ಯದ ಊರಿನ ನದಿಯ ಆಳದ ಗುಂಡಿಗಳಲ್ಲಿ ಡೈನಮೇಟ್ ಸಿಡಿಸಿ ಸತ್ತು ತೇಲುವ ಮೀನುಗಳನ್ನು ಮುಳುಗಿ ಮೇಲೆತ್ತಿ ದಡಕ್ಕೆ ತಂದು ಹಾಕುತ್ತಿದ್ದರು. ಈಗ ಯೋಚಿಸಿದರೆ ಅದೆಲ್ಲವೂ ಬಹಳ ದುಷ್ಟವಾದ ಕೃತ್ಯಗಳೆಂದು ನನಗೆ ಅನಿಸುತ್ತದೆ. ನನ್ನದೇ ತೋಟದ ಉತ್ಪತ್ತಿಯನ್ನು ಕದ್ದು ಮಾರುವುದು, ಒಂದೇ ದಿನದಲ್ಲಿ ಎರಡು ಮೂರು ಸಿನಿಮಾಗಳನ್ನು ಕದ್ದು ನೋಡುವುದು, ಸ್ಫೋಟಕಗಳನ್ನು ಬಳಸಿ ಮೀನುಹಿಡಿಯುವುದು, ಹೊಟ್ಟೆ ಬಿರಿಯುವಂತೆ ಹೋಟೆಲುಗಳಲ್ಲಿ ತಿನ್ನುವುದು. ಇವೆಲ್ಲಕ್ಕಿಂತಲೂ ಮಿಗಿಲಾದ ಕೆಟ್ಟ ಕೆಲಸವೆಂದರೆ, ನಮ್ಮ ಆ ಊರಲ್ಲಿದ್ದ ನಡುವಯಸ್ಸಿನ ಸ್ತ್ರೀಯೊಬ್ಬಳ ಮೋಹಕ್ಕೆ ಬಿದ್ದು ಆಕೆಗೂ ಸಣ್ಣ ಪುಟ್ಟ ಧನ ಸಹಾಯ ಮಾಡುತ್ತಿದ್ದೆ. ಆದರೆ ಬಹಳ ಜಾಣೆಯಾಗಿದ್ದ ಆಕೆ ನಾನು ನೀಡುತ್ತಿದ್ದ ಧನವನ್ನು ಮಾತ್ರ ತನ್ನ ಕುಪ್ಪುಸದೊಳಕ್ಕೆ ಭದ್ರವಾಗಿಟ್ಟುಕೊಂಡು ತನ್ನ ತನುವನ್ನೂ ಮನವನ್ನೂ ತನ್ನ ಸರೀಕ ವಯಸ್ಕರಿಗೆ ಅರ್ಪಿಸಿ ನನ್ನ ಜೊತೆ ಊರ ಸುತ್ತಲಿನ ಕತೆಗಳನ್ನು ಹೇಳಿ ಸಾಗ ಹಾಕುತ್ತಿದ್ದಳು. ಬಹಳ ಒಳ್ಳೆಯವರೂ ಪಾಪದವರೂ ಆಗಿದ್ದ ನನ್ನ ತಂದೆ (ಅವರು ಈಗ ಇಲ್ಲ. ಅವರ ಆತ್ಮಕ್ಕೆ ಶಾಂತಿ ಸಿಗಲಿ) ವಾರಕ್ಕೊಮ್ಮೆ ನನಗೆ ಕನ್ನಡದ ಕತೆ ಪುಸ್ತಕಗಳನ್ನೂ ಪತ್ರಿಕೆಗಳನ್ನೂ ತಂದು ಕೊಡುತ್ತಿದ್ದರು. ಅವೆಲ್ಲವನ್ನೂ ನಾನು ನೆಲದ ಮೇಲೆ ಹರಡಿ, ಕುಕ್ಕುರುಗಾಲಲ್ಲಿ ಕುಳಿತು ನೆಲಕ್ಕೆ ಕಣ್ಣು ಕೀಲಿಸಿ ಓದುತ್ತಿದ್ದೆ. ಮನಸೊಳಗೆ ಕದ್ದು ನೋಡಿದ ಕನ್ನಡ, ತಮಿಳು ಸಿನಿಮಾದ ಕತೆಗಳು, ಮಿದುಳೊಳಗೆ ಅಪ್ಪ ತಂದಿರಿಸುತ್ತಿದ್ದ ಅರೇಬಿಯಾದ ಸಾವಿರದೊಂದು ರಾತ್ರಿಯ ಕತೆಗಳು, ಹಾತಿಮತಾಯಿಯ ಕತೆಗಳು, ಜಾತಕದ ಕತೆಗಳು, ರಾಮಾಯಣ ಮಹಾಭಾರತದ ಕತೆಗಳು, ಮೀನು ಹಿಡಿಯುತ್ತಿದ್ದಾಗ ಕೇಳುತ್ತಿದ್ದ ಅನೈತಿಕವೂ ಹಾದರದವೂ ಆದ ಪುಳಕದ ಕತೆಗಳು, ಮದ್ರಸಾದಲ್ಲಿ ಅರಬಿಯಲ್ಲಿ ಕುರಾನು ಕಲಿಯುವಾಗ ಕೇಳುತ್ತಿದ್ದ ಕಣ್ಣೀರಿಟ್ಟು ನ್ಯಾಯ ಕೇಳುವ ಒಂಟೆಗಳ, ಹಾರುವ ಕುದುರೆಗಳ, ತಾವೇ ತಾವಾಗಿ ಚಲಿಸುತ್ತಿದ್ದ ರಕ್ತಸಿಕ್ತ ಖಡ್ಗಗಳ ಕತೆಗಳು, ನೋಡಿದ, ಕೇಳಿದ, ಅನುಭವಿಸಿದ ಮತ್ತು ಓದಿದ ಆ ದಿನದ ಎಲ್ಲವನ್ನೂ ಒಂದು ಕತೆಯನ್ನಾಗಿಸಿ ಹೆಚ್ಚುಕಡಿಮೆ ಹಾದರದಂತಿದ್ದ ಅದರಲ್ಲಿ ಸಣ್ಣಗಿನದೊಂದು ನೈತಿಕ ಎಳೆಯನ್ನು ಸೇರಿಸಿ ಇರುಳು ಹೊತ್ತಲ್ಲಿ ಅಮ್ಮನಿಗೂ, ತಮ್ಮ ತಂಗಿಯರಿಗೂ ಮತ್ತು ತಣ್ಣಗಿನ ಚಂದಿರನ ತುಂಡಿನ ಹಾಗಿದ್ದ ಅವಳಿಗೂ ಹೇಳುವುದಿತ್ತಲ್ಲ ಅದು ಬಹಳ ಆಪ್ಯಾಯಮಾನವೂ, ರೋಚಕವೂ ಹಾಗೂ ಹಸಿವು ಮೈಥುನದಷ್ಟೇ ಅಗತ್ಯದ್ದೂ ಆಗಿತ್ತು. ಹಾಗಾಗಿ ಕತೆ ಹೇಳುವುದನ್ನು ನನ್ನ ಸ್ವಯಾರ್ಜಿತ ಸ್ಥಿರ ಆಸ್ತಿಯೆಂದೇ ಅಂದುಕೊಂಡಿದ್ದೆ ಮತ್ತು ಈಗಲೂ ಅಂದುಕೊಂಡಿರುವೆ. ಆದರೆ ಕತೆ ಬರೆಯುವುದಿದೆಯಲ್ಲಾ ಅದು ಬಹಳ ಕಷ್ಟದ ಕೆಲಸ. ಅದರಲ್ಲೂ ಕನ್ನಡದ ಈಗಿನ ಸಾಹಿತ್ಯಿಕ, ಸಾಂಸ್ಕೃತಿಕ ಹೊತ್ತಿನಲ್ಲಿ ಇನ್ನೂ ಕಷ್ಟ. ನಾನು ಎಮ್ಮೆ ಎಂದು ಬರೆದರೆ ಕೋಣನೆಂದು ತಿಳಿದುಕೊಂಡು ಅದರ ಹಿಂಭಾಗದಲ್ಲಿ ಇಲ್ಲದ್ದನ್ನು ಹುಡುಕುವ ಅಥವಾ ಊಹಿಸುವ ಸಾಂಸ್ಕೃತಿಕ ರಾಜಕಾರಣದ ಈ ಹೊತ್ತಲ್ಲಿ ನನಗೆ ಯಾಕೋ ನಾನು ಪೂರ್ವಸೂರಿಗಳ ಕಾಲದವನು ಅನಿಸುತ್ತದೆ. ಮೊದಲೇ ಕತೆ ಬರೆ ಎಂದು ಯಾರಾದರೂ ಹೇಳಿದರೆ ಕೊಲ್ಲಲು ಕರೆದುಕೊಂಡು ಹೋಗುತ್ತಿದ್ದಾರೆ ಎಂದು ಭಯಪಡುವ ನನಗೆ ಕತೆಯೊಂದನ್ನು ಬರೆದಾದ ಮೇಲೆ ಆಗುವ ಮುಜುಗರಗಳು ಇನ್ನೂ ತಮಾಷೆಯಾಗಿರುತ್ತವೆ. ಬೇಡ ಬಿಡಿ. ಯಾರನ್ನೂ ಇನ್ನು ಮುಂದೆ ಲೇವಡಿ ಮಾಡಬಾರದು ಎಂದು ಯಾವಾಗಲೋ ತೀರ್ಮಾನಿಸಿದ್ದೇನೆ. ಆದರೆ ನಲ್ಲೆಯರಂತಹ, ತಮ್ಮ ತಂಗಿಯರಂತಹ,